# ಯಾವ ರಹಸ್ಯವನ್ನು ಬಚ್ಚಿಟ್ಟುಕೊಳ್ಳಬೇಕು





ಸೋಮುವಿನ ತಾಯಿಯ ಹುಟ್ಟಿದ ಹಬ್ಬವು ಬರುತ್ತಿತ್ತು. ತುಂಬಾ ಆಸಕ್ತಿಯಿಂದ ಗುಟ್ಟಾಗಿ ತಾಯಿಯ ಹುಟ್ಟುಹಬ್ಬಕ್ಕೆ ಸೋಮು ಕಾಣಿಕೆ ತಂದಿದ್ದಾ ಹಾಗೂ ಆಚರಣೆಗೆ ತಯಾರಿ ಮಾಡಿದ್ದ. ಆತ ಆ ಗುಟ್ಟನ್ನು ತಾಯಿಗೂ ಹೇಳಿರಲಿಲ್ಲ. ಅಮ್ಮನಿಗೆ ಗುಟ್ಟಾಗಿ ಗುಲಾಬಿ ಬಣ್ಣದ ಸೀರೆಯನ್ನು ತಂದಿದ್ದ, ಅದನ್ನು ತೆರೆದು ನೋಡಿದಾಗ ಅವಳು ಎಷ್ಟು ಖುಷಿ ಪಡಬಹುದೆಂದು ಯೊಚಿಸಿ ಖುಷಿಪಡುತ್ತಾ ಕಾತರದಿಂದ ಕಾದಿದ್ದ. ಸಂಜೆಗೆ ಅತಿಥಿಗಳು ಬರುವರೆಂದು, ಕೇಕ್‌ನ್ನು ತರಿಸಲು ಯೊಚಿಸುತ್ತಿದ್ದಾ. ಆದರೆ ಈ ವಿಷಯವು ತಂದೆಗೆ ತಿಳಿದಿತ್ತು. ಏಕೆಂದರೆ ಅವರೆ ಹುಟ್ಟುಹಬ್ಬ ಆಚರಣೆಗಾಗಿ ಸೋಮುವಿಗೆ ಸಹಾಯ ಮಾಡುತ್ತಿದ್ದರು. ಟಾಮಿ ಮತ್ತು ಸೋಮು ಆತ್ಮೀಯ ಗೆಳೆಯರಾಗಿದ್ದರು ಅದಕ್ಕೆ ಸೋಮು ಎಲ್ಲಾ ವಿಷಯಗಳನ್ನು ಟಾಮಿಗೆ ಹೇಲುತ್ತಿದ್ದಾ ಕಾರಣ ಟಾಮಿಗೂ ಈ ಗುಟ್ಟು ತಿಳಿದಿತ್ತು.




ತಾಯಿಯ ಹುಟ್ಟಿದ ಹಬ್ಬದ ಹಿಂದಿನ ದಿನ ಸೋಮು ಶಾಲೆಗೆ ಹೋಗಿದ್ದ. ಟಾಮಿ ಆಚೆ ಕುಳಿತಿದ್ದ. ಗೇಟ್ ಬಳಿ ಅಪರಿಚಿತರು ಬಂದರು. ಟಾಮಿ ಇರುವುದನ್ನು ಗಮನಿಸದೆ ಮನೆಯಕಡೆ ಕೈಮಾಡಿ ತೋರಿಸುತ್ತಾ "ಆಗಲಿ ನಾವು ರಾತ್ರಿ ಬರೋಣ.. ಎಲ್ಲರೂ ಮಲಗಿರುತ್ತಾರೆ.." ಒಬ್ಬ ಹೇಳಿದ."ಪಕ್ಕದಲ್ಲಿದ್ದ ಬಾಗಿಲು ಹಳೆಯದಾಗಿದೆ ಅದನ್ನು ಒಡೆಯೋಣಾ ಎಂದು ಮಾತನಾಡಿಕೊಂಡರು. ಕಳ್ಳತನ ಮಾಡುವಾಗ ಯಾರಾದರೂ ತೊಂದರೆ ಕೊಟ್ಟರೆ ಅವರ ತಲೆಯನ್ನು ಹೊಡೆಯೋಣಾ" ಇನ್ನೊಬ್ಬ ಹೇಳಿದ.

ಟಾಮಿ ಬಹಳ ಗಮನಕೊಟ್ಟು ಈ ಮಾತು ಕೇಳಿಸಿಕೊಂಡ. ಕಳ್ಳತನ ಮತ್ತು ನೋವು ಮಾಡುವುದು, "ಸೋಮುವನ್ನು ಹೊಡೆಯುವರೆ?" ಎಂದು ಟಾಮಿ ಚಿಂತಿಸಿದ.



ಇಷ್ಟೆಲ್ಲಾ ಮಾತನಾಡಬೇಕಾದರೆ ಅವರು ಟಾಮಿ ಇರುವುದನ್ನು ಗಮನಿಸಿದರು ಆದರೆ ಅದು ತಾವು ಕಳ್ಳತನ ಮಾಡಬೇಕು ಎಂದುಕೊಂಡಿರುವ ಸೋಮುವಿನ ಮನೆಯ ನಾಯಿ ಎಂಬುದು ಅವರಿಗೆ ಗೊತ್ತಿರಲಿಲ್ಲಾ. “ಏ ನಾಯಿ. ನಮ್ಮ ಗುಟ್ಟು ನಿನಗೆ ತಿಳಿಯಿತು. ನೀ ಯಾರಿಗೂ ಹೇಳಬೇಡ. ದೊಡ್ಡ ಬಿಸ್ಕತ್ ಪಟ್ಟಣ ನೀಡುವೆ” ಎಂದು ಮೊದಲನೆಯ ವ್ಯಕ್ತಿ ಹೇಳಿದ.“ನೀ ಏನಾದರೂ ಹೇಳಿದರೆ ಭಾರವಾದ ಕೋಲಿನಿಂದ ನಿನ್ನ ತಲೆಗೆ ಬಾರಿಸುವೆ” ಇನ್ನೊಬ್ಬ ವ್ಯಕಿ ಹೇಳಿದ.





ಟಾಮಿಗೆ ಭಯ ಹಾಗೂ ಗೊಂದಲ ವಾಯಿತು. ಆದರೆ ಅದು ರಹಸ್ಯ? ಆದರೆ ಗುಟ್ಟು ಸೋಮು ಅಮ್ಮನ ಜನುಮದಿನದ ಆಚರಣೆಯ ಹಾಗೆ ಒಳ್ಳೆಯದಾಗಿರಬೇಕು? ಹಾಗಾದರೆ ಇದು ಯಾವ ರಹಸ್ಯ–ಅಪರಿಚಿತರು ಕಳ್ಳತನ ಮಾಡಿ ದೋಚಿ ನೋವು ಮಾಡಲು ಬಂದಿದ್ದಾರೆ. ಸೋಮುವಿನ ಕುಟುಂಬಕ್ಕೆ ತೊಂದರೆ ಆಗುತ್ತಿದೆ ಎಂದಾದರೆ ಟಾಮಿ ಸುಮ್ಮನಿರಬೇಕಿತ್ತೇ? ಖಂಡಿತಾ ಇಲ್ಲ. ಇಂತಹ ಗುಟ್ಟುಗಳನ್ನು ಮುಚ್ಚಿಡಬಾರದು. ಬಿಸ್ಕತ್‌ಗಾಗಿ ಅಲ್ಲ. ತೊಂದರೆ ಕೊಡುತ್ತಾರೆ ಎಂಬ ಭಯದಲ್ಲೂ ಅಲ್ಲ. ಅಪರಿಚಿತರು ಕೆಟ್ಟದ್ದನ್ನು ಮಾಡುವಾಗ ಈ ಗುಟ್ಟನ್ನು ಮುಚ್ಚಿಡಬಾರದು.



ಆ ದಿನ ರಾತ್ರಿ ಟಾಮಿ ಸೋಮುವಿನ ಬಳಿ ಮಲಗಲು ಹೋಗದೆ, ಕಿಟಕಿ ಬಳಿ ಕುಳಿತ. ನಂತರ ತಾನು ಹಿಂದಿನ ದಿನ ನೋಡಿದ ಅಪರಿಚಿತ ವ್ಯಕ್ತಿಗಳು ಮನೆಯ ಕಡೆ ಬರುತ್ತಿರುವುದನ್ನು ಕಂಡು ಜೋರಾಗಿ ಬೊಗಳಿದ.



ಸೋಮುವಿನ ತಂದೆ ಮತ್ತು ತಾಯಿಗೆ ಎಚ್ಚರವಾಯಿತು, ಟಾಮಿ ಯಾಕೆ ಬೊಗಳುತ್ತಿದೆ ಎಂದು ಯೋಚಿಸಿ ಬೇಗನೆ ಬಂದು ಅಪರಿಚಿತ ವ್ಯಕ್ತಿಗಳು ಮನೆಯ ಹತ್ತಿರ ಬಂದಿರುವುದನ್ನು ನೋಡಿದರು.





ಸೋಮುವಿನ ತಂದೆ ಪೋಲೀಸರಿಗೆ ಫೋನ್ ಮಾಡಿದರು.




ಪೊಲೀಸರು ಪೊದೆಯಲ್ಲಿ ಅಡಗಿದ್ದ ಕಳ್ಳರನ್ನು ಹಿಡಿದರು.



ಎಲ್ಲರೂ ಟಾಮಿಯನ್ನು ಮುದ್ದಿಸಿದರು. “ಬುದ್ಧಿವಂತ ನಾಯಿ” ಎಂದು ಇಷ್ಟವಾದ ಆಹಾರವನ್ನು ನೀಡಿದರು.





ಸೋಮು ಕೇಳಿದ “ಕಳ್ಳರು ಬರುವುದು ನಿನಗೆ ಹೇಗೆ ಗೊತ್ತು”. “ಅವರ ಮಾತುಗಳನ್ನು ನಾನು ಕೇಳಿಸಿಕೊಂಡಿದ್ದೆ ಹಾಗೂ ಉಪಾಯಗಳನ್ನು ನಾನು ಅರ್ಥ ಮಾಡಿಕೊಂಡಿದ್ದೆ. ಒಳ್ಳೆಯ ಗುಟ್ಟುಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು, ಕೆಟ್ಟದ್ದಲ್ಲಾ ಎಂದು ಟಾಮಿ ಮನಸ್ಸಿನಲ್ಲಿ ಅಂದುಕೊಂಡ. ಆ ಸಂಜೆ ಸೋಮು ಹಾಗೂ ಅವನ ತಂದೆ ಅವರ ತಾಯಿಗೆ ಹುಟ್ಟಿದ ಹಬ್ಬದ ಕಾಣಿಕೆ ಕೊಟ್ಟು ಖುಷಿ ಪಡುವುದನ್ನು ನೋಡಿದನು. ಹುಟ್ಟಿದ ಹಬ್ಬದ ಆಚರಣೆ, ಕೇಕ್, ಅತಿಥಿಗಳು ಈ ಎಲ್ಲಾ ಉಪಾಯ ಸಂತೋಷ ತಂದಿತು. "ನೀವು ಇಷ್ಟೆಲ್ಲಾ ತಯಾರಿ ಮಾಡಿರುತ್ತೀರಾ ಎಂದು ನಾ ಯಾವತ್ತು ಅಂದುಕೊಂಡಿರಲಿಲ್ಲಾ” ಎಂದು ಸೋಮುವಿನ ತಾಯಿ ಹೇಳಿದರು.“ಒಳ್ಳೆಯ ಗುಟ್ಟುಗಳು ಯಾರಿಗೂ ನೋವು ತರೋಲ್ಲ, ಎಲ್ಲರೂ ಸಂತೋಷವಾಗಿರಬಹುದು”

Community Child & Adolescent Mental Health Service Project,
Department of Child & Adolescent Psychiatry,
National Institute of Mental Health & Neruosciences (NIMHANS)
(Institute Of National Importance)
Hosur Road, Benaaluru - 560029

Website : www.nimhans.ac.in
Email : capnimhans@gmail.com

Supported by the Dept. of Women and Child Development, Govt. of Karnataka

Design and Art work : SathishRam